# ಲೆಕ್ಕಾಚಾರ

■ ವಸುಮತಿ ಉಡುಪ



**ಗೋ**ಪಾಲಯ್ಯ ಹೃದಯಾಘಾತದಿಂದ ಅಚಾನಕ್ಕಾಗಿ ತೀರಿಕೊಂಡು ಅವತ್ತಿಗೆ ಹದಿನೆಂಟನೇ ದಿನ. ಕ್ರಿಯಾಕರ್ಮಗಳೆಲ್ಲಾ ಸಾಂಗವಾಗಿ ನೆರವೇರಿ ಬಂಧುಬಳಗದಿಂದ ಹೊಗಳಿಕೆಗೆ ಪಾತ್ರಳಾಗಿದ್ದಳು ಕಾವೇರಿ. ದಾನಧರ್ಮ, ದಕ್ಷಿಣೆ, ಯಾವುದರಲ್ಲೂ ಬೆರಳು ತೋರಿಸುವಂತಿರಲಿಲ್ಲ. 'ಯಾಕೆ ಬೇಕು ಗಂಡುಮಕ್ಕಳು? ಇಂಥ ಒಬ್ಬ ಮಗಳಿದ್ದರೆ ಸಾಕೇ ಸಾಕು' ಎನ್ನುವ ಮಾತು ಎಲ್ಲರ ಬಾಯಲ್ಲಿ ಚಲಾವಣೆಯಾಗಿತ್ತು. ಅಳಿಯ ಕೂಡಾ ಚಿನ್ನದಂತವನು. ಇರುವಾಗ ಮಾವನನ್ನು ಮನೆಯಲ್ಲಿಟ್ಟುಕೊಂಡು ತಂದೆಯ ಸ್ಥಾನ ಕೊಟ್ಟು ಗೌರವದಿಂದ ನೋಡಿಕೊಂಡಿದ್ದ. ಸತ್ತ ಮೇಲೆ ಮಗನ ಸ್ಥಾನದಲ್ಲಿ ಕುಳಿತು ಕರ್ಮಾಂತರಗಳನ್ನು ನಡೆಸಿಕೊಟ್ಟಿದ್ದ. 'ಅಪ್ಪ ಇನ್ನಿಲ್ಲ' ಎನ್ನುವ ನೋವಿನ ನಡುವೆ ಕೂಡಾ ಕಾವೇರಿಗೆ ಗಂಡನ ಬಗ್ಗೆ ಅಭಿಮಾನ ಅನ್ನಿಸಿತ್ತು.

'ವರ್ಷ ಕಳೆಯೋದ್ರಲ್ಲಿ ಒಂದ್ಸಲ ಗಯಾಕ್ಕೆ ಹೋಗ್ಬರೋಣ ಕಣ್ರೀ. ಅಲ್ಲಿ ತರ್ಪಣ ಕೊಟ್ಟು ಪಿಂಡ ಹಾಕಿದ್ರೆ ಪ್ರತಿವರ್ಷ ವೈದೀಕ ಮಾಡ್ಬೇಕಾದ್ದಿಲ್ವಂತೆ. ಮಾಡಿದ್ರೂ ಸಮ, ಬಿಟ್ರೂ ಸಮ' ಅಂದಿದ್ದಳು ಕಾವೇರಿ.

'ನೋಡೋಣ ತಡಿ. ಈಗ್ಲೇ ಗುಡ್ಡ ಗುಣಿಸೋಕೆ ಹೋಗ್ಬೇಡ' ಎಂದು ಹೇಳಿದ್ದ ಕೇಶವ. ಅಪ್ಪ, ಅಮ್ಮ ಹೋದಾಗ ಕೂಡಾ ಅವನು ಕೈ ಬಿಚ್ಚಿ ಲಕ್ಷಗಟ್ಟಲೆ ಖರ್ಚು ಮಾಡಿರಲಿಲ್ಲ. ಊರಲ್ಲಿದ್ದ ಅಣ್ಣ ಎಲ್ಲವನ್ನೂ ನೋಡಿಕೊಂಡಿದ್ದ. 'ತನ್ನ ಋಣವೂ ಸಲ್ಲಲಿ' ಎಂದು ಇವನು ಎಣಿಸಿಕೊಟ್ಟ ದುಡ್ಡನ್ನು ಎಣಿಸಿ ಕೂಡಾ ನೋಡದೆ ಬೀರುವಿನಲ್ಲಿ ಇಟ್ಟುಕೊಂಡಿದ್ದ. ಕೊನೆಗೂ ಅಪ್ಪ, ಅಮ್ಮ ತನ್ನ ಮೇಲೆ ಅಸಮಾಧಾನ ಇಟ್ಟುಕೊಂಡೇ ಪೆಟ್ಟಿಗೆ ಕಟ್ಟಿದರು ಎನ್ನುವ ನೋವು ಇವತ್ತಿಗೂ ನೆನೆಸಿಕೊಂಡಾಗೊಮ್ಮೆ ಕೇಶವನ ಮನಸ್ಸನ್ನು ಕೊರೆಯುತ್ತಿರುತ್ತದೆ. ಕಾವೇರಿಯನ್ನು ತಾನು ಇಷ್ಟಪಟ್ಟು ಮದುವೆಯಾಗಿದ್ದು ಅವರಿಗೆ ಹಿತ ಆಗಿರಲಿಲ್ಲ. ದೊಡ್ಡ ಕುಳಗಳಿಗೆ ಬಲೆ ಬೀಸಿ ಕಾದು ಕೂತಿದ್ದವರಿಗೆ ಮಗ 'ಸುಧಾಮನ ಒಕ್ಕಲು' ಅನ್ನುವಂತಿದ್ದ ಮನೆಯ ಹುಡುಗಿಗೆ ಮೆಚ್ಚಿ ಮರುಳಾಗಿದ್ದು ಬಿಸಿತುಪ್ಪವಾಗಿತ್ತು. ಹೇಳಿಕೊಳ್ಳುವುದಕ್ಕೆ ಗೋಪಾಲಯ್ಯನಿಗೆ ಒಂದು ದಿನಸಿ ಅಂಗಡಿ ಇತ್ತು. ಕೇಶವ ಮನೆ ಮಾಡಿಕೊಂಡಿದ್ದ ಜಾಗಕ್ಕೆ ತೀರಾ ಹತ್ತಿರದಲ್ಲಿದ್ದಿದ್ದರಿಂದ ಅತ್ಯಗತ್ಯದ ವಸ್ತುಗಳಿಗೆ ಅವನು ಅಲ್ಲಿಗೇ ವ್ಯಾಪಾರಕ್ಕೆ ಹೋಗುತ್ತಿದ್ದ. ಮಾಲ್‌ಗಳ ಭರಾಟೆ ಆರಂಭವಾಗಿ ಸಣ್ಣಪುಟ್ಟ ಅಂಗಡಿಗಳು ಒಂದೊಂದಾಗಿ ಬಾಗಿಲು ಮುಚ್ಚುವ ಕಾಲದಲ್ಲಿ ಗೋಪಾಲಯ್ಯನ ಅಂಗಡಿ ಇನ್ನೂ ಕುಟುಕು ಜೀವ ಉಳಿಸಿಕೊಂಡಿದ್ದಕ್ಕೆ ಒಂದು ಸಕಾರಣ ಇತ್ತು. ಉದ್ರಿ ವ್ಯವಹಾರ. ಲೆಕ್ಕ ಬರೆಸಿ ತಿಂಗಳಿಡೀ ಸಾಮಾನು ತೆಗೆದುಕೊಂಡು ಹೋಗಿ ತಿಂಗಳ ಮೊದಲ ದಿನ ಸಂಬಳ ಬಂದೊಡನೆ ಲೆಕ್ಕ ಚುಕ್ತಾ ಮಾಡುವ ಸಣ್ಣಪುಟ್ಟ ನೌಕರಿದಾರರಿಗೆ ಇವರ ಅಂಗಡಿ ಅನುಕೂಲ ಮಾತ್ರವಲ್ಲ, ಅಭ್ಯಾಸ ಕೂಡಾ ಆಗಿತ್ತು. ಕೇಶವನಿಗೆ ಹೀಗೆ ಲೆಕ್ಕ ಬರೆಸಿ ವ್ಯವಹಾರ ಮಾಡಬೇಕಾದ ಯಾವ ದರ್ದೂ ಇರಲಿಲ್ಲ.